# ನೋಡಿ ನೋಡಿ ಮರುಳಾದರು



## ‘ಸೇಕ್ರೆಡ್ ಗೇಮ್’ ಮೋಡಿ ಮಾಡಿದ್ದು ಯಾಕೆ?

ಅನುರಾಗ್ ಕಶ್ಯಪ್, ವಿಕ್ರಮಾದಿತ್ಯ ಮೋಟ್ವಾನೆ ಹಾಗೂ ನೀರಜ್ ಘೈವಾನ್ ನಿರ್ದೇಶಿಸಿದ ‘ಸೇಕ್ರೆಡ್ ಗೇಮ್ಸ್’ ಸರಣಿಯು ಭಾರತದಲ್ಲಿ ನೆಟ್‌ಫ್ಲಿಕ್ಸ್‌ನಲ್ಲಿ ಜನಪ್ರಿಯವಾಯಿತು. ಎರಡು ಸೀಜನ್‌ಗಳಲ್ಲಿ ಅದು ಪ್ರಸಾರವಾಯಿತು. ಯಾವಾಗ ಬೇಕಾದರೂ ನೆಟ್‌ಫ್ಲಿಕ್ಸ್‌ನಲ್ಲಿ ಅದನ್ನು ಮತ್ತೆ ಮತ್ತೆ ನೋಡಬಹುದು. ಗಾಯತೊಂಡೆ ಎಂಬ ವಿಕೃತ ಕೇಂದ್ರಪಾತ್ರವನ್ನು ಉಳ್ಳ ನೆಟ್‌ಫ್ಲಿಕ್ಸ್ ಧಾರಾವಾಹಿ ಇದು. ಅವನನ್ನು ಹಿಡಿಯಲು ಒಬ್ಬ ಪೊಲೀಸ್. ಅವರಿಬ್ಬರ ನಡುವಿನ ಕಳ್ಳ–ಪೊಲೀಸ್ ಆಟ ಹಳೆಯ ಕಾಲದ್ದಲ್ಲ.

ಭೂಗತ ಲೋಕ, ವಿಷಣ್ಣ ವರ್ತನೆ, ಹಸಿ ಹಸಿಯಾದ ಹಾಗೂ ಅಶ್ಲೀಲವಾದೀತೆಂಬ ಅಳುಕೇ ಇಲ್ಲದಂತೆ ಬರೆದ ಸಂಭಾಷಣೆ, ಸಮಕಾಲೀನ ರಾಜಕೀಯದ ವಾಸನೆ ಬಡಿಯುವ ದೃಶ್ಯಗಳು, ಜೀವನಶೈಲಿ ಬದಲಿಸುವ ಆಶ್ರಮದ ಗುರು, ಅಲ್ಲಿ ಚಿಕಿತ್ಸೆ ನೀಡುವ ಹೊಸಕಾಲದ ಹೆಣ್ಣುಮಗಳು... ಇವೆಲ್ಲವೂ ‘ಸೇಕ್ರೆಡ್ ಗೇಮ್ಸ್’ನಲ್ಲಿವೆ. ವರುಣ್ ಗ್ರೋವರ್, ಸ್ಮಿತಾ ಸಿಂಗ್, ವಸಂತನಾಥ್, ಧ್ರುವ್ ನಾರಂಗ್, ಪೂಜಾ ತೊಲಾನಿ, ನಿಹಿತ್ ಭಾವೆ ಇವರೆಲ್ಲ ಸರಣಿಗೆ ಬರೆದವರು. ನವಾಜುದ್ದೀನ್ ಸಿದ್ದಿಕಿ ಸಹಜಾಭಿನಯ ಹಾಗೂ ಮಡಿವಂತಿಕೆ ಇಲ್ಲದ ವರ್ತನೆ ಧಾರಾವಾಹಿಯ ಜನಪ್ರಿಯತೆಯನ್ನು ಹೆಚ್ಚಿಸಿತು. ಸೈಫ್ ಅಲಿ ಖಾನ್, ರಾಧಿಕಾ ಆಪ್ಟೆ, ಪಂಕಜ್ ತ್ರಿಪಾಠಿ, ಕಲ್ಕಿ ಕೊಯ್ಲಿನ್ ತರಹದ ಸಿನಿಮಾನುಭವಿಗಳೂ ಇದರಲ್ಲಿ ಅಭಿನಯಿಸಿರುವುದು ವಿಶೇಷ.

50 ನಿಮಿಷಗಳ ಒಂದು ಕಂತು ಸಿನಿಮಾದಲ್ಲಿ ಇರುವಷ್ಟೇ ತೀವ್ರವಾದ, ತಾಂತ್ರಿಕ ಕಸುಬುದಾರಿಕೆಯ ದೃಶ್ಯಗಳನ್ನು ಒಳಗೊಂಡಿದೆ. ಎರಡನೇ ಆವೃತ್ತಿಯ ಸರಣಿಯಲ್ಲಿ ಸಮಕಾಲೀನ ರಾಜಕೀಯ ಹಾಗೂ ಸ್ವಾಮೀಜಿಗಳ ನಡುವಣ ಸಂಬಂಧವನ್ನು ಕೂಡ ನವಿರಾಗಿ ಹೇಳಿದ್ದು ಅನೇಕ ಯುವಕರನ್ನು ಆಕರ್ಷಿಸಿತು.

ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಹಳ್ಳಿಗಳಲ್ಲಿ ಈಗಲೂ ಪ್ರದರ್ಶಿತವಾಗುವ ‘ಮೂರೂವರೆ ವಜ್ರಗಳು’, ‘ಕುರುಕ್ಷೇತ್ರ’ದಂಥ ನಾಟಕಗಳನ್ನು ರಾತ್ರಿಯಿಂದ ಬೆಳಗಿನ ಜಾವದವರೆಗೆ ಕಂಬಳಿ ಹೊದ್ದು ನೋಡುವವರು ಇದ್ದಾರೆ. ಆದರೆ, ಅಲ್ಲಿ ಪಾತ್ರಧಾರಿಗಳು ಬದಲಾಗುತ್ತಾರೆ. ಪ್ರಸಂಗಗಳು ಒಂದಾದ ಮೇಲೆ ಒಂದರಂತೆ ಬೇರೆಯದೇ ಭಾವವನ್ನು ಸ್ಫುರಿಸುತ್ತವೆ. ಮುಂದೇನು ಎಂಬ ಪ್ರಶ್ನೆ ಇರುವುದೇ ಇಲ್ಲ. ಬಹುತೇಕ ಪೌರಾಣಿಕ ಕಥೆಗಳು ಗೊತ್ತಿರುವವರೇ ನೋಡುವುದರಿಂದ ಅದನ್ನು ಒಂದು ಕಲಾಪ್ರಕಾರವಾಗಿ ಇದಿರುಗೊಳ್ಳುತ್ತಾರೆ. ಯಕ್ಷಗಾನ ಪ್ರಸಂಗಗಳಿಗೂ ಇದೇ ಅನ್ವಯವಾಗುವುದು. ಒಂದು ನಿರ್ದಿಷ್ಟ ರಾಗವನ್ನು ದೀರ್ಘಾಲಾಪದ ಮೂಲಕ ಉಣಿಸುವ ಸಂಗೀತಗಾರನ ಧ್ಯಾನಸ್ಥಭಾವದಲ್ಲಿ ನೋಡುಗನೂ ಲೀನನಾಗುವಂತಹ ಅನುಭೂತಿಯನ್ನು ಇಂಥ ನೋಡುಸಂಸ್ಕೃತಿ ನೀಡುತ್ತದೆ.

ಬಯಲಲ್ಲಿ ಕುಳಿತು ನಾಟಕವನ್ನೋ, ಹರಿಕಥೆಯನ್ನೋ ನೋಡುತ್ತಾ ಕೇಳುತ್ತಾ ಸುಖಿಸುವವರು ಆಗೀಗ ಅಲ್ಲೇ ನಿದ್ರೆಗೂ ಜಾರುತ್ತಾರೆ. ಪಕ್ಕದಲ್ಲಿ ಇರುವವರು ‘ಎದ್ದೇಳಲಾ... ಭೀಮ ಪಸಂದಾಗವ್ನೆ ನೋಡಲಾ...’ ಎಂದು ಹಾಗೆ ಮಲಗಿದವರನ್ನು ಎಬ್ಬಿಸುವವರೂ ಇರುತ್ತಾರೆ. ಚಪ್ಪಾಳೆ, ಶಿಳ್ಳೆಗಳ ರಿಲೀಫ್. ದೂರದಲ್ಲಿ ತುಂಟ ಕಣ್ಣಲ್ಲಿ ಮಾತನಾಡಿಸುವ ಗೆಳತಿ. ಕೂತಲ್ಲೇ ಪ್ರಸಂಗಗಳ ವಿಮರ್ಶೆ. ತಪ್ಪು ಡೈಲಾಗ್ ಹೇಳಿದರೆ ಅಲ್ಲಿಯೇ ಮಾತಿನ ಅಂಬು ತೂರುವ ಸಹೃದಯರು... ಹೀಗೆ ಬಯಲು ನಾಟಕಗಳಿಗೆ ಹಲವು ಸಾಂಸ್ಕೃತಿಕ–ದೇಸಿ ಆಯಾಮಗಳು ಇರುತ್ತವೆ.

ಬಿಂಜ್ ವಾಚಿಂಗ್ ಹಾಗೆ ಅಲ್ಲ. ಅದು ಗೊತ್ತೇ ಆಗದಂತೆ ಸುತ್ತಲೂ ಗೋಡೆಗಳನ್ನು ಎಬ್ಬಿಸುತ್ತದೆ. ಮನಸ್ಸು ದ್ವೀಪವಾಗಿ,



